# ಕಲಿಕೆಗಾಗಿ ಹೊಸ ಹಾದಿ ತೆರೆಯೋಣ

# *ಮುನ್ನಡೆಯುವ*

BRIDGE MATERIALS FOR CLASS VI

## ತರಗತಿ – 6

# ಸಮಾಜ ವಿಜ್ಞಾನ

**(SOCIAL SCIENCE)**

**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆ (ಎಸ್.ಸಿ.ಇ.ಆರ್.ಟಿ.)**

**ಕೇರಳ**

**2022**

ಆತ್ಮೀಯ ಮಕ್ಕಳೇ,

ಕಳೆದ ಎರಡು ಶೈಕ್ಷಣಿಕ ವರ್ಷಗಳಲ್ಲಿ (2020–21 ಮತ್ತು 2021–22) ಕೋವಿಡ್‌ನಿಂದಾಗಿ ಶಾಲೆಗಳನ್ನು ಸಂಪೂರ್ಣವಾಗಿ ತೆರೆಯಲಾಗಲಿಲ್ಲ. ಆದ್ದರಿಂದ ಪ್ರತಿ ತರಗತಿಯಲ್ಲಿ ಕಲಿಯಬೇಕಾದ ಆಶಯಗಳು ಮತ್ತು ಕೌಶಲ್ಯಗಳನ್ನು ಪಡೆದುಕೊಳ್ಳುವಲ್ಲಿ ಕೆಲವು ಲೋಪಗಳು ಕಂಡುಬಂದಿವೆ. ಕಾಲುವಾರ್ಷಿಕ ಪರೀಕ್ಷೆಯ ಉತ್ತರ ಪತ್ರಿಕೆಗಳ ವಿಶ್ಲೇಷಣೆ ಮತ್ತು ಶಿಕ್ಷಕರೊಂದಿಗೆ ಸಂವಾದದ ಆಧಾರದ ಮೇಲೆ ಇದು ಕಂಡುಬಂದಿದೆ. ಪರಿಣಾಮಕಾರಿಯಾಗಿ ಮುಂದುವರಿದ ಶಿಕ್ಷಣವನ್ನು ಸಕ್ರಿಯಗೊಳಿಸಲು ಈ ಕಲಿಕೆಯ ಅಂತರವನ್ನು ಪರಿಹರಿಸುವುದು ಅತ್ಯಗತ್ಯ. ಪ್ರತಿ ತರಗತಿಯ ಪಾಠಗಳನ್ನು ಕಲಿಯುವ ಪೂರ್ವಜ್ಞಾನವನ್ನು ಖಚಿತಪಡಿಸಿಕೊಳ್ಳುವುದು ಉತ್ತಮ. ಇದು ಪ್ರತಿ ತರಗತಿಗೆ ಅಗತ್ಯವಾದ ಪೂರ್ವಜ್ಞಾನವನ್ನು ಖಚಿತಪಡಿಸಿಕೊಳ್ಳಲು ಚಟುವಟಿಕೆಗಳನ್ನು ಒಳಗೊಂಡಿರುವ ಕಿರು ಪುಸ್ತಕ ಆಗಿದೆ. ಆ ಪುಸ್ತಕದಲ್ಲಿನ ಚಟುವಟಿಕೆಗಳನ್ನು ನಿಮ್ಮ ಸ್ವಂತ ಅಥವಾ ಶಿಕ್ಷಕರ ಸಹಾಯದಿಂದ ಪೂರ್ಣಗೊಳಿಸಬೇಕು. ಕಲಿಕೆಯ ಅಂತರವನ್ನು ಪರಿಹರಿಸಲು ಮತ್ತು ನಿಮ್ಮ ಅಧ್ಯಯನವನ್ನು ಹೆಚ್ಚು ಆತ್ಮವಿಶ್ವಾಸದಿಂದ ಮುಂದುವರಿಸಲು ನಾನು ಬಯಸುತ್ತೇನೆ.

**ನಿರ್ದೇಶಕರು**

ಎಸ್.ಸಿ.ಇ.ಆರ್.ಟಿ.

**ಚಟುವಟಿಕೆ – 1.1**

**ಕಲಿಕಾ ಸಾಧನೆ :**

- ಸಿ.ಇ, ಬಿ.ಸಿ.ಇ ಎಂಬ ಕಾಲಗಣನೆಯ ಶತಮಾನದ ಆಶಯಗಳನ್ನು ತಿಳಿದುಕೊಳ್ಳುವುದು.

**ಆಶಯಗಳು :**

ತರಗತಿ – 6 ಯೂನಿಟ್ – 1 : ಚರಿತ್ರೆಯ ಕಡೆಗೆ

ತರಗತಿ – 6 ಯೂನಿಟ್ – 1 : ಮಧ್ಯಕಾಲೀನ ಭಾರತ ಅಧಿಕಾರ ಕೇಂದ್ರಗಳು

ತರಗತಿ – 6 ಯೂನಿಟ್ – 2 : ಮಧ್ಯಕಾಲೀನ ಭಾರತ ಸಂಪನ್ಮೂಲ – ವಿನಿಮಯ – ಸಮಾಜ

ತರಗತಿ – 6 ಯೂನಿಟ್ – 7 : ಮಧ್ಯಕಾಲೀನ ಭಾರತ ಕಲೆ ಮತ್ತು ಸಾಹಿತ್ಯ

ತರಗತಿ – 6 ಯೂನಿಟ್ – 8 :ಮಧ್ಯಕಾಲೀನ ಪ್ರಪಂಚ


ತರಗತಿ – 6 ಯೂನಿಟ್ – 9 : ಮಧ್ಯಕಾಲೀನ ಕೇರಳ

**ಚಟುವಟಿಕಾ ಪ್ಯಾಕೇಜ್**

**ಅಗತ್ಯವಾದ ಸಾಮಾಗ್ರಿಗಳು :**

- ಮೀಟರ್ ಸ್ಕೇಲ್
- ವೈಟ್ ಬೋರ್ಡ್ ಮಾರ್ಕರ್ / ಚೋಕ್
- ಐತಿಹಾಸಿಕ ಘಟನೆಗಳು ಮತ್ತು ವರ್ಷಗಳನ್ನು ಬರೆದ ಕಲರ್ ಚಾರ್ಟುಗಳು
- ವರ್ಕ್‌ಶೀಟ್
- ಶತಮಾನವನ್ನು ದಾಖಲಿಸಿದ ಕಲರ್ ಚಾರ್ಟುಗಳು (ಡಬಲ್ ಸೈಡ್ ಗಂ ಟೇಪ್ ಅಂಟಿಸಿರಬೇಕು)

**ಶತಮಾನದೆಡೆಗೆ**




ಚರಿತ್ರೆಯ ಘಟನೆಗಳು ನಡೆದ ವರ್ಷ ಯಾವ ಶತಮಾನಕ್ಕೆ ಒಳಪಡುವುದೆಂದು ಕಂಡುಕೊಳ್ಳಲು ತರಗತಿಯ ಮಕ್ಕಳನ್ನು 2 ಗುಂಪುಗಳಾಗಿ ಮಾಡುವುದು. (ಎ, ಬಿ) ತರಗತಿ ಕೋಣೆಯ ಗೋಡೆಯಲ್ಲಿ 20 ಅಡಿ ಉದ್ದಕ್ಕೆ ವೈಟ್ ಬೋರ್ಡ್ ಮಾರ್ಕರ್ / ಚೋಕ್ ಉಪಯೋಗಿಸಿ ಮೇಲಿನ ಚಿತ್ರದಲ್ಲಿ ತೋರಿಸಿದಂತೆ ಟೈಮ್‌ಲೈನ್ ಬರೆದು ಶತಮಾನವನ್ನು ದಾಖಲಿಸುವುದು. ಪ್ರತಿ ಅಡಿಯಲ್ಲೂ ಬಿ.ಸಿ.ಇ. ನಾಲ್ಕನೇ ಶತಮಾನದಿಂದ ಹದಿನಾರನೇ ಶತಮಾನದ ವರೆಗೆ ದಾಖಲಿಸುವುದು. ಐತಿಹಾಸಿಕ ಘಟನೆಗಳು ಮತ್ತು ವರ್ಷವನ್ನು ಬರೆದಿರುವ ಕಲರ್ ಕಾರ್ಡುಗಳನ್ನು ಎ ಗುಂಪಿನ ಪ್ರತಿಯೊಬ್ಬ ವಿದ್ಯಾರ್ಥಿ ಆರಿಸಿ ತೆಗೆಯುವರು. ಅದನ್ನು ತಮ್ಮ ಉಡುಪಿನಲ್ಲಿ ಪಿನ್ ಮಾಡುವರು. ಲಭಿಸಿದ ವರ್ಷ ಯಾವ ಶತಮಾನಕ್ಕೆ ಸಂಬಂಧಿಸಿದೆಯೆಂದು ಕಂಡುಕೊಂಡು ಆ ಸ್ಥಾನದಲ್ಲಿ ನಿಲ್ಲುವರು. (ವಿದ್ಯಾರ್ಥಿಗಳು ಸರಿಯಾದ ಸ್ಥಾನದಲ್ಲಿ ನಿಲ್ಲುವರೆಂದು ಅಧ್ಯಾಪಕ/ಅಧ್ಯಾಪಿಕೆ ಖಾತರಿಪಡಿಸಬೇಕು.)

ಬಿ ಗುಂಪಿನ ಪ್ರತಿಯೊಬ್ಬರೂ ಶತಮಾನವನ್ನು ಬರೆದ ಚಾರ್ಟ್ ಕಾರ್ಡುಗಳನ್ನು (ಡಬಲ್ ಸೈಡ್ ಗಂ ಟೇಪ್ ಅಂಟಿಸಿದುದು) ಆರಿಸಿ ಟೈಮ್‌ಲೈನ್ ನಲ್ಲಿ ವರ್ಷಗಳಿಗನುಸಾರವಾಗಿ ನಿಲ್ಲುವ ಮಗುವಿನ ತಲೆಯ ಮೇಲ್ಭಾಗದಲ್ಲಿರುವ ಗೋಡೆಯಲ್ಲಿ ಕಾರ್ಡನ್ನು ಅಂಟಿಸುವುದು.

ಕಾಲಗಣನೆಗೆ ಸಂಬಂಧಿಸಿ ಶತಮಾನವನ್ನು ಲೆಕ್ಕಹಾಕುವುದು ಎಂಬ ಚಟುವಟಿಕೆ ಪ್ರಕ್ರಿಯಾಧಾರಿತವೂ ಚಟುವಟಿಕಾಧಾರಿತವೂ ಆಗಿ ಬದಲಾದರೆ ಅನಾಯಾಸವಾಗಿ ಕಲಿಕಾ ಸಾಧನೆಗಳನ್ನು ಗಳಿಸಲು ಸಾಧ್ಯವಾಗುವುದು.

**ಚಟುವಟಿಕೆ – 1.2**

ಮಕ್ಕಳನ್ನು ಆರು ಗುಂಪುಗಳಾಗಿ ಮಾಡುವುದು.

**ಘಟನೆಗಳನ್ನು ಕ್ರಮೀಕರಿಸಿ ಪಟ್ಟಿಯನ್ನು ಪೂರ್ತಿಗೊಳಿಸುವುದು.**

- ಸಿಂಧ್ ಆಕ್ರಮಣ – 712 ಸಿ.ಇ
- ಅಲೆಕ್ಸಾಂಡರ್ ಭಾರತವನ್ನು ಆಕ್ರಮಣ ಮಾಡಿದುದು – 327 ಬಿ.ಸಿ.ಇ
- ಕೊಲ್ಲ ವರ್ಷದ ಆರಂಭ – 825 ಸಿ.ಇ
- ಕೋನ್ ಸ್ಟಂಟಿನೋಪಲ್ ಆಕ್ರಮಿಸಲ್ಪಟ್ಟಿತು – 1456 ಸಿ.ಇ
- ಪಾನಿಪತ್ ಯುದ್ಧ – 1526 ಸಿ. ಇ
- ಕಳಿಂಗ ಯುದ್ಧ – 261 ಬಿ.ಸಿ.ಇ
- ಶಕ ವರ್ಷದ ಆರಂಭ – 78 ಸಿ.ಇ

**ಬಿ.ಸಿ.ಇ**

| ಐತಿಹಾಸಿಕ ಘಟನೆ | ವರ್ಷ | ಶತಮಾನ |
|---|---|---|
| | | |
| | | |

**ಸಿ.ಇ**

| ಐತಿಹಾಸಿಕ ಘಟನೆ | ವರ್ಷ | ಶತಮಾನ |
|---|---|---|
| | | |
| | | |
| | | |
| | | |
| | | |

**ಚಟುವಟಿಕೆ – 2.1**

**ಕಲಿಕಾ ಸಾಧನೆಗಳು**

- ಭೂಪಟದಲ್ಲಿ ದಿಕ್ಕುಗಳನ್ನು ನಿಖರವಾಗಿ ದಾಖಲಿಸುವುದು
- ಭೂಖಂಡಗಳು ಮತ್ತು ಸಾಗರಗಳಿಗೆ ಸಂಬಂಧಿಸಿದ ನಿಗಮನಗಳನ್ನು ರೂಪೀಕರಿಸುವುದು.

**ಆಶಯಗಳು**

ತರಗತಿ – 4 ಯೂನಿಟ್ – 8 : ಓದೋಣ ರಚಿಸೋಣ

ತರಗತಿ – 5 ಯೂನಿಟ್ – 6 : ಭೂಖಂಡಗಳೂ ಸಾಗರಗಳೂ

ತರಗತಿ – 6 ಯೂನಿಟ್ – 5 : ಭೂಮಿ ಕಥೆಯೂ ವಿಚಾರವೂ

**ಚಟುವಟಿಕಾ ಪ್ಯಾಕೇಜ್**

**ಅಗತ್ಯವಾದ ಸಾಮಾಗ್ರಿಗಳು**

- ಉತ್ತರಾರ್ಧಗೋಳ ಮತ್ತು ದಕ್ಷಿಣಾರ್ಧಗೋಳವನ್ನು ದಾಖಲಿಸಿರುವ ಪ್ರಪಂಚ ಭೂಪಟ (ಅನುಬಂಧ – 6.1)
- ಪ್ರಪಂಚ ಭೂಪಟ
- ಅಟ್ಲಾಸ್ – ಗುಂಪಿಗೆ ಒಂದರಂತೆ

ಫಿಫಾ ವಿಶ್ವಕಪ್ ಸ್ಪರ್ಧೆ 2022 – ಕತಾರ್‌ನಲ್ಲಿ ನವೆಂಬರ್ 20 ರಿಂದ ಡಿಸೆಂಬರ್ 18 ರ ವರೆಗಿನ ದಿನಗಳಲ್ಲಿ 32 ತಂಡಗಳ 64 ಸ್ಪರ್ಧೆಗಳು ನಡೆದವು. ಕೆಳಗೆ ನೀಡಿದ 8 ಗ್ರೂಪ್‌ಗಳಲ್ಲಾಗಿ ಸ್ಪರ್ಧೆ ನಡೆದವು.

ಎ ಯಿಂದ ಎಚ್ ವರೆಗಿನ ಗ್ರೂಪ್‌ಗಳಲ್ಲಾಗಿ ನಡೆದ ಸ್ಪರ್ಧೆಗಳಲ್ಲಿ ವಿವಿಧ ಭೂಖಂಡಗಳಿಂದಿರುವ ದೇಶಗಳು ಭಾಗವಹಿಸಿದ್ದವು.

| **ಗ್ರೂಪ್ ಎ** | **ಗ್ರೂಪ್ ಬಿ** | **ಗ್ರೂಪ್ ಸಿ** | **ಗ್ರೂಪ್ ಡಿ** |
|---|---|---|---|
| ಕತಾರ್ | ಇಂಗ್ಲಂಡ್ | ಅರ್ಜೆಂಟಿನಾ | ಫ್ರಾನ್ಸ್ |
| ಈಕ್ವೆಡಾರ್ | ಇರಾನ್ | ಸೌದಿ ಅರೇಬಿಯಾ | ಆಸ್ಟ್ರೇಲಿಯಾ |
| ಸೆನಗಲ್ | ಯು.ಎಸ್.ಎ | ಮೆಕ್ಸಿಕೋ | ಡೆನ್ಮಾರ್ಕ್ |
| ನೆದರ್ ಲ್ಯಾಂಡ್ | ವೇಲ್ಸ್ | ಪೋಲೇಂಡ್ | ಟ್ಯುನಿಷ್ಯಾ |
| **ಗ್ರೂಪ್ ಇ** | **ಗ್ರೂಪ್ ಎಫ್** | **ಗ್ರೂಪ್ ಜಿ** | **ಗ್ರೂಪ್ ಎಚ್** |
| ಸ್ಪೈನ್ | ಬೆಲ್ಜಿಯಂ | ಬ್ರೆಜಿಲ್ | ಪೋರ್ಚುಗಲ್ |
| ಕೋಸ್ಟರಿಕಾ | ಕೆನಡಾ | ಸರ್ಬಿಯಾ | ಘಾನಾ |
| ಜರ್ಮನಿ | ಮೊರೋಕ್ಕೋ | ಸ್ವಿಜಲ್ಯಾಂಡ್ | ಉರುಗ್ವೆ |
| ಜಪಾನ್ | ಕ್ರೋಯೇಷ್ಯಾ | ಕ್ಯಾಮರೂನ್ | ಕೊರಿಯಾ ರಿಪಬ್ಲಿಕ್ |


ಮಕ್ಕಳನ್ನು ಎಂಟು ಗುಂಪುಗಳಾಗಿ ವರ್ಗೀಕರಿಸುವುದು. ಬಳಿಕ ಮಕ್ಕಳಿಗೆ ಪ್ರಪಂಚ ಭೂಪಟ, ಅಟ್ಲಾಸ್ ಎಂಬಿವುಗಳನ್ನು ನೀಡುವುದು. ಪ್ರತಿ ಗುಂಪು ಪ್ರಪಂಚ ಭೂಪಟ, (ಅನುಬಂಧ – 6.1) ಅಟ್ಲಾಸ್ ಎಂಬಿವುಗಳ ಸಹಾಯದಿಂದ ದೇಶಗಳ ಸ್ಥಾನವನ್ನು ಗುರುತಿಸುವುದು. ಕಂಡುಕೊಂಡುದುದನ್ನು ಕೆಳಗೆ ನೀಡಿರುವ ಪಟ್ಟಿಯ ಆಧಾರದಲ್ಲಿ ವರ್ಗೀಕರಿಸುವುದು.

**ವಿಶ್ವಕಪ್ ನಲ್ಲಿ ಭಾಗವಹಿಸುವ ದೇಶಗಳು**

| ಅರ್ಧಗೋಳ | ದೇಶಗಳು |
|---|---|
| ಉತ್ತರಾರ್ಧಗೋಳದಲ್ಲಿ ಮಾತ್ರ ಒಳಗೊಳ್ಳುವ ದೇಶಗಳು | |
| ದಕ್ಷಿಣಾರ್ಧಗೋಳದಲ್ಲಿ ಮಾತ್ರ ಒಳಗೊಳ್ಳುವ ದೇಶಗಳು | |
| ಎರಡೂ ಗೋಳಗಳಲ್ಲಿ ಒಳಪಡುವ ದೇಶಗಳು | |

**ಚಟುವಟಿಕೆ 2.2**

**ಅರ್ಧಗೋಳಗಳಲ್ಲಾಗಿ ಕಂಡುಕೊಂಡ ದೇಶಗಳು ಯಾವೆಲ್ಲಾ ಭೂಖಂಡಗಳಲ್ಲಿರುವುದೆಂದು ಪಟ್ಟಿ ಮಾಡಿರಿ.**




| **ಭೂಖಂಡ** | **ದೇಶಗಳು** |
|---|---|
| ಏಷ್ಯಾ | |
| ಆಫ್ರಿಕಾ | |
| ಉತ್ತರ ಅಮೇರಿಕಾ | |
| ದಕ್ಷಿಣ ಅಮೇರಿಕಾ | |
| ಅಂಟಾರ್ಟಿಕಾ | |
| ಯುರೋಪ್ | |
| ಆಸ್ಟ್ರೇಲಿಯಾ | |

**ಚಟುವಟಿಕೆ – 3.1**

**ಕಲಿಕಾ ಸಾಧನೆಗಳು**

- ಭೂಪಟ, ಗ್ಲೋಬ್, ಅಟ್ಲಾಸ್ ಎಂಬಿವುಗಳ ಸಹಾಯದೊಂದಿಗೆ ಭೂಖಂಡಗಳ ಮತ್ತು ಸಾಗರಗಳನ್ನು ವಿವರಿಸುವರು.

**ಆಶಯಗಳು**


ತರಗತಿ – 5 ಯೂನಿಟ್ – 6 ಭೂಖಂಡಗಳೂ ಸಾಗರಗಳೂ

ತರಗತಿ – 6 ಯೂನಿಟ್ – 6 ವೈವಿಧ್ಯಗಳ ಜಗತ್ತು


**ಚಟುವಟಿಕಾ ಪ್ಯಾಕೇಜ್**

**ಅಗತ್ಯವಾದ ಸಾಮಾಗ್ರಿಗಳು**


- ಭೂಮಧ್ಯರೇಖಾ ಹವಾಗುಣ ವಲಯ ಗುರುತಿಸಿದ ಭೂಪಟ
- ಉಷ್ಣ ಮರುಭೂಮಿ ಗುರುತಿಸಿದ ಭೂಪಟ
- ತುಂದ್ರಾವಲಯ ಗುರುತಿಸಿದ ಭೂಪಟ
- ತಾಪ ವಲಯದ ಔಟ್‌ಲೈನ್ ಭೂಪಟ (ಅನುಬಂಧ – 6.3)
- ಪ್ರಪಂಚ ಭೂಪಟ – ಹವಾಗುಣ ವಲಯಗಳು (ಅನುಬಂಧ – 6.4)




**ಭೂಮಧ್ಯರೇಖಾ ಹವಾಗುಣ ವಲಯ**




**ಉಷ್ಣ ಮರುಭೂಮಿಗಳು**




**ತುಂದ್ರಾ ಹವಾಗುಣ ವಲಯ**

ಸೂರ್ಯ ಚೈತನ್ಯ ಭೂಮಿಗೆ ಒಂದೇ ರೀತಿಯಲ್ಲಿ ವಿತರಣೆಯಾಗುವುದಿಲ್ಲ. ಭೂಮಧ್ಯರೇಖಾ ಪ್ರದೇಶಗಳಲ್ಲಿ ಸೂರ್ಯಕಿರಣಗಳು ಲಂಬವಾಗಿ ಬೀಳುವುದರಿಂದ ಇಲ್ಲಿ ತಾಪದ ಪ್ರಮಾಣ ಬಹಳ ಹೆಚ್ಚಾಗಿರುವುದು. ಧ್ರುವಗಳ ಕಡೆಗೆ ಹೋದಂತೆ ಸೂರ್ಯಪ್ರಕಾಶದ ಬಾಗುವಿಕೆ ಉಂಟಾಗುವ ಕಾರಣ ತಾಪದ ಪ್ರಮಾಣ ಕಡಿಮೆಯಾಗುವುದು. ತಾಪದ ಲಭ್ಯತೆಯ ವ್ಯತ್ಯಾಸದ ಆಧಾರದಲ್ಲಿ ಭೂಮಧ್ಯರೇಖೆಯಿಂದ ಧ್ರುವಗಳಿಗಿರುವ ಭೂಪ್ರದೇಶಗಳನ್ನು ವಿವಿಧ ತಾಪ ವಲಯಗಳಾಗಿ ವರ್ಗೀಕರಿಸಲಾಗಿದೆ. ಈ ತಾಪ ವಲಯಗಳಲ್ಲಿ ವ್ಯತ್ಯಸ್ಥ ಹವಾಮಾನ ಅನುಭವವಾಗುವುದು.

ನೀಡಿರುವ 3 ಭೂಪಟಗಳನ್ನು ವಿಶ್ಲೇಷಿಸಿ ಪ್ರಪಂಚ ಭೂಪಟದ ಸಹಾಯದಿಂದ ಕೆಳಗೆ ನೀಡಿರುವ ಹವಾಗುಣ ಪ್ರದೇಶಗಳು ಯಾವ ವಲಯವನ್ನು ಸೂಚಿಸುವುದೆಂದು ಕಂಡುಹಿಡಿಯಿರಿ.

**ಭೂಮಧ್ಯರೇಖಾ ಹವಾಗುಣ ವಲಯ**

- ಅಮೆಜೋನ್ ನದೀ ತೀರ
-
-
-

**ಉಷ್ಣ ಮರುಭೂಮಿಗಳು**

- ಕಲಹಾರಿ
-
-
-
-
-
-

**ತುಂದ್ರಾ ವಲಯ**

- ಯುರೇಷ್ಯಾ
-

**ಚಟುವಟಿಕೆ – 3.2**

ಮೂರು ಹವಾಗುಣ ವಲಯಗಳಿಗೆ ಸಂಬಂಧಿಸಿ ಆರು ಪದಗಳನ್ನು ನೀಡುವುದು. ಉದಾಹರಣೆಗೆ ಅಮೆಜೋನ್, ಕಲಹಾರಿ, ಇನ್ಯೂಟುಗಳು, ಬೋಡೋಯಿನುಗಳು, ರೈನ್ ಡಿಯರ್ ಪಿಗ್ಮಿಗಳು.

ಮಕ್ಕಳನ್ನು ಆರು ಗುಂಪುಗಳಾಗಿಸಿ ಪ್ರತಿ ಗುಂಪಿಗೂ ಹವಾಗುಣ ವಲಯಗಳಿಗೆ ಸಂಬಂಧಿಸಿದ ಮೂರು ಭೂಪಟಗಳನ್ನು ನೀಡುವುದು. (ಭೂಮಧ್ಯರೇಖಾ ಹವಾಗುಣ ವಲಯ, ಉಷ್ಣ ಮರುಭೂಮಿ, ತುಂದ್ರಾ ವಲಯ)

ಒಂದು ಗುಂಪಿಗೆ ಒಂದು ಭೂಪಟ ಎಂಬ ರೀತಿಯಲ್ಲಿ ತಾಪವಲಯಗಳನ್ನು ತೋರಿಸುವ ಪ್ರಪಂಚ ಭೂಪಟವನ್ನು ನೀಡುವುದು. ನೀಡಿರುವ ತಾಪವಲಯಗಳನ್ನು ಒಳಗೊಂಡಿರುವ ಔಟ್‌ಲೈನ್ ಭೂಪಟದಲ್ಲಿ (ಅನುಬಂಧ – 6.3) ಹವಾಗುಣ ವಲಯಗಳಿಗೆ ವ್ಯತ್ಯಸ್ಥ ಬಣ್ಣಗಳನ್ನು ನೀಡಿ ಭೂಪಟವನ್ನು ಪೂರ್ತಿಗೊಳಿಸಿರಿ.

**ಚಟುವಟಿಕೆ – 3.3**

ಪ್ರಪಂಚ ಭೂಪಟ – ಹವಾಗುಣ ವಲಯಗಳು (ಅನುಬಂಧ – 6.4) ಉಪಯೋಗಿಸಿ ಕೆಳಗೆ ನೀಡಿರುವ ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ತಾಪವಲಯ | ತಾಪವಲಯ ಯಾವೆಲ್ಲಾ ಅಕ್ಷಾಂಶಗಳ ಮಧ್ಯದಲ್ಲಿರುವುದು | ಹವಾಗುಣ ವಲಯ | ತಾಪವಲಯ ಯಾವೆಲ್ಲಾ ರೇಖಾಂಶಗಳ ಮಧ್ಯದಲ್ಲಿರುವುದು |
|---|---|---|---|
| ಉಷ್ಣ ವಲಯ | | | ಭೂಮಧ್ಯರೇಖೆಯಿಂದ $10^0$ ಉತ್ತರ $10^0$ ದಕ್ಷಿಣ ಅಕ್ಷಾಂಶಗಳ ಮಧ್ಯೆ |
| | | ಉಷ್ಣ ಮರುಭೂಮಿ | |
| | ಎರಡೂ ಅರ್ಧಗೋಳಗಳಲ್ಲೂ $30^0$ ನಿಂದ $65^0$ ವರೆಗೆ | | |
| ಶೀತವಲಯ | | | ಉತ್ತರಾರ್ಧಗೋಳದಲ್ಲಿ ಆರ್ಟಿಕ್ ವೃತ್ತದಲ್ಲಿ ($66½^0$) ಉತ್ತರ |

**ಚಟುವಟಿಕೆ — 4.1**

**ಕಲಿಕಾ ಸಾಧನೆ**

1. ಪ್ರಾಚೀನ ಶಿಲಾಯುಗ ಮತ್ತು ನವೀನ ಶಿಲಾಯುಗ ಎಂಬಿವುಗಳನ್ನು ಹೋಲಿಸುವುದು.
2. ಜಗತ್ತಿನ ಕಂಚಿನಯುಗ ಸಂಸ್ಕೃತಿಯನ್ನು ತಿಳಿದುಕೊಂಡು ಅವುಗಳ ವಿಶೇಷತೆಗಳನ್ನು ವಿಶ್ಲೇಷಣೆ ಮಾಡುವುದು.
3. ಋಗ್ವೇದ ಕಾಲಘಟ್ಟದ ಜೀವನರೀತಿಯನ್ನು ತಿಳಿದುಕೊಂಡು ಹರಪ್ಪದ ಜೀವನ ರೀತಿಯೊಂದಿಗೆ ಹೋಲಿಸುವುದು.

**ಆಶಯಗಳು**

ತರಗತಿ – 5 ಯೂನಿಟ್ — 2 ಶಿಲೆಯಿಂದ ಲೋಹದ ಕಡೆಗೆ

ತರಗತಿ – 5 ಯೂನಿಟ್ — 7 ಕಬ್ಬಿಣ ಉಂಟುಮಾಡಿದ ಬದಲಾವಣೆಗಳು

ತರಗತಿ – 5 ಯೂನಿಟ್ — 8 ಅಹಿಂಸೆ, ಅರಿವು, ಅಧಿಕಾರ

ತರಗತಿ – 6 ಯೂನಿಟ್ — 1 ಮಧ್ಯಕಾಲೀನ ಭಾರತ ಅಧಿಕಾರ ಕೇಂದ್ರಗಳು

ತರಗತಿ – 6 ಯೂನಿಟ್ — 2 ಮಧ್ಯಕಾಲೀನ ಭಾರತ ಸಂಪನ್ಮೂಲ — ವಿನಿಮಯ — ಸಮಾಜ

ತರಗತಿ – 6 ಯೂನಿಟ್ — 8 ಮಧ್ಯಕಾಲೀನ ಪ್ರಪಂಚ

ತರಗತಿ – 6 ಯೂನಿಟ್ — 9 ಮಧ್ಯಕಾಲೀನ ಕೇರಳ

**ಚಟುವಟಿಕಾ ಪ್ಯಾಕೇಜ್**

**ಅಗತ್ಯವಾದ ಸಾಮಾಗ್ರಿಗಳು**

1. ಮೆಸೊಪೊಟೇಮಿಯಾ ನಾಗರಿಕತೆ — ಓದಿನ ಟಿಪ್ಪಣಿ (ಅನುಬಂಧ — 6.5)
2. ಈಜಿಪ್ಟಿನ ನಾಗರಿಕತೆ — ಓದಿನ ಟಿಪ್ಪಣಿ (ಅನುಬಂಧ — 6.5)
3. ಹರಪ್ಪ ನಾಗರಿಕತೆ — ಓದಿನ ಟಿಪ್ಪಣಿ (ಅನುಬಂಧ — 6.5)
4. ಚೀನಾದ ನಾಗರಿಕತೆ — ಓದಿನ ಟಿಪ್ಪಣಿ (ಅನುಬಂಧ — 6.5)

**ಮಾನವನ ವಿಕಾಸ ಪರಿಣಾಮದ ಚರಿತ್ರೆ**

| | | |
|---|---|---|
| ಬೆಂಕಿಯನ್ನು ಉಪಯೋಗಿಸಿದರು | ಕಂಚಿನ ತಾಮ್ರದಿಂದ ತಯಾರಿಸಿದ ಉಪಕರಣಗಳನ್ನು ಉಪಯೋಗಿಸಿದರು. | |
| ಕೃಷಿ ಆರಂಭಿಸಿದರು | ಕಬ್ಬಿಣದಿಂದ ತಯಾರಿಸಿದ ಉಪಕರಣಗಳನ್ನು ಉಪಯೋಗಿಸಿದರು. | |
| ನದೀತೀರ ನಾಗರಿಕತೆ | ಮನೆಗಳಲ್ಲಿ ವಾಸಿಸತೊಡಗಿದರು | |
| ವೇದಕಾಲ | ತಾಮ್ರದಿಂದ ತಯಾರಿಸಿದ ಆಯುಧಗಳು, ಉಪಕರಣಗಳು | |
| ಚಕ್ರವನ್ನು ಉಪಯೋಗಿಸಿದರು | ಚತುರ್ವರ್ಣಗಳು | ಬರವಣಿಗೆ ಆರಂಭವಾಯಿತು |

ನೀಡಿರುವ ಹೇಳಿಕೆಗಳನ್ನು ಕಾಲಾನುಸಾರವಾಗಿ ಬರೆದು ಫ್ಲೋಚಾರ್ಟನ್ನು ತಯಾರಿಸಿರಿ.

ಮನೆಗಳಲ್ಲಿ ವಾಸಿಸತೊಡಗಿದರು

↓

______

↓

ಕೃಷಿ ಆರಂಭಿಸಿದರು.

↓

______

↓

ತಾಮ್ರದಿಂದ ತಯಾರಿಸಿದ ಆಯುಧಗಳು, ಉಪಕರಣಗಳು

↓

______

↓

ಬರವಣಿಗೆ ಆರಂಭವಾಯಿತು

↓

______

↓

ವೇದಕಾಲ

↓

______

↓


ಕಬ್ಬಿಣದಿಂದ ತಯಾರಿಸಿದ ಉಪಕರಣಗಳನ್ನು ಉಪಯೋಗಿಸಿದರು.

**ಚಟುವಟಿಕೆ 4.2**

ಮಕ್ಕಳನ್ನು ನಾಲ್ಕು ಗುಂಪುಗಳಾಗಿ ವರ್ಗೀಕರಿಸಿ ಪ್ರತಿ ಗುಂಪಿಗೂ ವ್ಯತ್ಯಸ್ಥ ನಾಗರಿಕತೆಗಳ ಓದಿನ ಟಿಪ್ಪಣಿಗಳು (ಅನುಬಂಧ – 6.5) ನೀಡುವುದು. ಕೆಳಗೆ ನೀಡಿರುವ ಪಟ್ಟಿ ಪೂರ್ತಿಗೊಳಿಸಿರಿ.


| ನಾಗರಿಕತೆ | ಲಿಪಿ | ನಿರ್ಮಾಣಗಳು | ನದಿಗಳು | ಕ್ಯಾಲೆಂಡರ್ | ಇತರ ಪ್ರತ್ಯೇಕತೆಗಳು |
|---|---|---|---|---|---|
| | | | | | |
| | | | | | |
| | | | | | |
| | | | | | |

## ಅನುಬಂಧ – 6.1




WORLD MAP
Canada
United States of America
Greenland (Denmark)
Russia
China
India
Australia
Brazil
Kazakhstan
Mongolia
NORTH PACIFIC OCEAN
SOUTH PACIFIC OCEAN
NORTH ATLANTIC OCEAN
SOUTH ATLANTIC OCEAN
INDIAN OCEAN
ARCTIC OCEAN
SOUTHERN OCEAN
Prime Meridian
Equator
Tropic of Cancer
Tropic of Capricorn
Arctic Circle
Antarctic Circle


**ಅನುಬಂಧ — 6.2**


Robinson Projection
NORTH PACIFIC OCEAN
NORTH ATLANTIC OCEAN
SOUTH ATLANTIC OCEAN
INDIAN OCEAN
SOUTHERN OCEAN
PACIFIC OCEAN
Canada
United States of America
Alaska (USA)
Greenland (Denmark)
Mexico
Brazil
Argentina
Russia
China
India
Kazakhstan
Mongolia
Australia
ANTARCTICA

**ಅನುಬಂಧ – 6.3**



**ಅನುಬಂಧ — 6.4**


North pole
ಶೀತ ವಲಯ / Frigid Zone
Arctic circle (66° 33')
ಸಮಶೀತೋಷ್ಣ ವಲಯ / Temterate Zone
65
Subtropics
Tropic of cancer (23° 27')
ಉಷ್ಣ ವಲಯ (Tropical Zone)
Equator
ಉಷ್ಣ ವಲಯ (Tropical Zone)
Tropic of capricorn (23° 27')
Subtropics
ಸಮಶೀತೋಷ್ಣ ವಲಯ / Temterate Zone
Antarctic circle (66° 33')
65
ಶೀತ ವಲಯ /Frigid Zone
South pole
90°
30°
0°
30°
90°

## ಅನುಬಂಧ – 6.5

**ಮೆಸೊಪೊಟೇಮಿಯಾದ ನಾಗರಿಕತೆ :** ಮೆಸೆಪೊಟೇಮಿಯ ಎಂಬ ಪದದ ಅರ್ಥವು 'ಎರಡು ನದಿಗಳ ನಡುವೆ ಇರುವ ಪ್ರದೇಶ' ಎಂದಾಗಿದೆ. ಗ್ರೀಕ್ ಭಾಷೆಯಲ್ಲಿ 'ಮೆಸೋಸ್' (Mesos) ಅಂದರೆ ನಡುವೆ ಎಂದೂ 'ಪೊಟಾಮೋಸ್' (Potomos) ಅಂದರೆ ನದಿ ಎಂಬ ಅರ್ಥವೂ ಬರುತ್ತದೆ. ಆರ್ಮೇನಿಯಾ ಪರ್ವತದಿಂದ ಉದ್ಭಸಿವಿ ದಕ್ಷಿಣಕ್ಕೆ ಹರಿದು ಪರ್ಷಿಯಾ ಕೊಲ್ಲಿಯಲ್ಲಿ ಸಂಗಮಿಸುವ ಯುಫ್ರಟಿಸ್, ಟೈಗ್ರಿಸ್ ನದಿಗಳ ನಡುವೆ ಇರುವ ಪ್ರದೇಶದಲ್ಲಿ ಬೆಳೆದು ಬಂದ ನಾಗರಿಕತೆಯೇ ಮೆಸೊಪೊಟೇಮಿಯಾ ನಾಗರಿಕತೆ. ಪರ್ಷಿಯನ್ ಕೊಲ್ಲಿಯೊಂದಿಗೆ ಸೇರಿಕೊಂಡಿರುವ ಫಲವತ್ತಾದ ದಕ್ಷಿಣ ಪ್ರದೇಶವು ಸುಮೇರ್ ಪ್ರದೇಶ ಎಂದು ಕರೆಯಲ್ಪಡುತ್ತದೆ. ನೀರಾವರಿ ಸೌಕರ್ಯಗಳ ಉಪಯೋಗದೊಂದಿಗೆ ಕೃಷಿ ಕ್ಷೇತ್ರವು ಅಭಿವೃದ್ಧಿ ಹೊಂದಿತು ಹಾಗೂ ನಗರಗಳು ಬೆಳೆದು ಬಂದುವು. ಖಗೋಳ ಶಾಸ್ತ್ರ, ಗಣಿತ ಶಾಸ್ತ್ರ ಎಂಬೀ ಕ್ಷೇತ್ರಗಳಲ್ಲಿ ಗಮನಾರ್ಹವಾದ ಬೆಳವಣಿಗೆಯನ್ನು ಇವರು ಸಾಧಿಸಿದ್ದರು. ಚಂದ್ರನನ್ನು ಆಧರಿಸಿ 30 ದಿವಸಗಳೂ 12 ತಿಂಗಳುಗಳೂ ಇರುವ ಒಂದು ಕ್ಯಾಲೆಂಡರನ್ನು ಇವರು ಉಪಯೋಗಿಸಿದ್ದರು. ದಶಾಂಶ ಪದ್ಧತಿಯು ಇವರಿಗೆ ತಿಳಿದಿತ್ತು.

**ಈಜಿಪ್ಟಿನ ನಾಗರಿಕತೆ :** ಈಜಿಪ್ಟಿನ ನಾಗರಿಕತೆಯು ನೈಲ್ ನದೀತಟದಲ್ಲಿ ಬೆಳೆದು ಬಂತು. ವಿಜ್ಞಾನ, ಕಲೆ, ಕರಕುಶಲ ಎಂಬೀ ಕ್ಷೇತ್ರಗಳಲ್ಲಿ ಈಜಿಪ್ಟಿನ ನಾಗರಿಕತೆಯು ಗಮನಾರ್ಹ ಬೆಳವಣಿಗೆಯನ್ನು ಸಾಧಿಸಿತು. ಜಲಗಡಿಯಾರ, ಸೌರಗಡಿಯಾರ ಎಂಬಿವುಗಳನ್ನು ಅವರು ಉಪಯೋಗಿಸಿದ್ದರು. 365 ದಿವಸಗಳು ಒಳಗೊಂಡಿರುವ ಒಂದು ಸೌರ ಪಂಚಾಂಗವನ್ನೂ ಅವರು ಉಪಯೋಗಿಸಿದ್ದರು.

ವಾಸ್ತುಶಿಲ್ಪಕ್ಕೆ ಈಜಿಪ್ಟಿನ ನಾಗರಿಕತೆಯ ಕೊಡುಗೆ ಮಹತ್ತರದ್ದಾಗಿದೆ. ರಾಜರ ಸಮಾಧಿಗಳಾದ ಪಿರಮಿಡ್ಡುಗಳು ವಾಸ್ತು ಶಿಲ್ಪಕ್ಷೇತ್ರದ ಅದ್ಭುತಗಳಾಗಿವೆ. ಇವುಗಳಲ್ಲಿ ಕುಫು ರಾಜನು ಗಿಝೆಯಲ್ಲಿ ನಿರ್ಮಿಸಿ ಪಿರಮಿಡ್ಡು ಅತ್ಯಂತ ದೊಡ್ಡದಾಗಿದೆ. ಈ ಪಿರಮಿಡ್ಡಿಗೆ 13 ಎಕರೆ ವಿಸ್ತೀರಣವೂ 500 ಅಡಿ ಎತ್ತರವೂ ಇದೆ. ಪ್ರತಿಮೆ ನಿರ್ಮಾಣದಲ್ಲೂ ಅವರು ಅಸಾಮಾನ್ಯ ಪ್ರತಿಭೆಯನ್ನು ಅವರು ತೋರಿಸಿದ್ದರು. ಮನುಷ್ಯನ ತಲೆಯೂ ಸಿಂಹದ ಶರೀರವೂ ಇರುವ 'ಸ್ಫಿಂಕ್ಸ್' ಪ್ರತಿಮೆಯು ಒಂದು ವಿಸ್ಮಯವಾಗಿದೆ. ಈ ಪ್ರತಿಮೆಗೆ 100 ಅಡಿ ಉದ್ದವೂ 70 ಅಡಿ ಎತ್ತರವೂ ಇದೆ.

**ಹರಪ್ಪ ನಾಗರಿಕತೆ :** ಹರಪ್ಪ ನಾಗರಿಕತೆಯು ಸಿಂಧೂ ನದೀ ತಟದಲ್ಲಿ ಬೆಳೆದು ಬಂದ ನಾಗರಿಕತೆಯಾಗಿದೆ. ಆದುದರಿಂದ ಅದು ಸಿಂಧೂ ನದೀ ನಾಗರಿಕತೆ ಎಂದೂ ಕರೆಯಲ್ಪಡುತ್ತದೆ. ಇಂದಿನ ಪಾಕಿಸ್ಥಾನದ ಪ್ರದೇಶದ ಹರಪ್ಪವು ಈ ನಾಗರಿಕತೆಗೆ ಸಂಬಂಧಿಸಿ ಕಂಡುಹಿಡಿದ ಮೊದಲ ಕೇಂದ್ರವಾಗಿದೆ. ಪುರಾತತ್ವ ಇಲಾಖೆ ಸಂಶೋಧಕರಾದ ಜೋನ್ ಮಾರ್ಷಲ್, ದಯಾರಾಂ ಸಾಹನಿ, ಆರ್.ಡಿ. ಬ್ಯಾನರ್ಜಿ, ಎಸ್.ಆರ್. ರಾವ್ ಮುಂತಾದವರ ನೇತೃತ್ವದಲ್ಲಿ ನಡೆದೆ ಸಂಶೋಧನೆಗಳಿಂದಾಗಿ ಈ ನಾಗರಿಕತೆಗೆ ಸಂಬಂಧಿಸಿದ ಹಲವಾರು ಮಾಹಿತಿಗಳು ನಮಗೆ ಲಭ್ಯವಾದುವು. ಇತ್ತೀಚೆಗೆ ಕಂಡುಹಿಡಿದ ಗುಜರಾತಿನ 'ಖೀರ್ ಸಾರ' ಒಳಗೊಂಡಂತೆ ಹರಪ್ಪ ನಾಗರಿಕತೆಗೆ ಸಂಬಂಧಿಸಿ ಸಾವಿರಕ್ಕಿಂತಲೂ ಅಧಿಕ ಕೇಂದ್ರಗಳನ್ನು ಕಂಡುಹಿಡಿಯಲಾಗಿದೆ.

ಸುಟ್ಟ ಇಟ್ಟಿಗೆಗಳಿಂದ ನಿರ್ಮಿಸಿದ ಹಲವಾರು ಕಟ್ಟಡಗಳು, ವಿಶಾಲವಾದ ರಸ್ತೆಗಳು, ಧಾನ್ಯದ ಉಗ್ರಾಣಗಳು, ಚರಂಡಿಗಳು ಮುಂತಾದವುಗಳು ಈ ನಾಗರಿಕತೆಯ ಪ್ರಧಾನ ವಿಶೇಷತೆಗಳಾಗಿವೆ. ಅವರಿಗೆ ಬರವಣಿಗೆ ಕಲೆಯೂ ತಿಳಿದಿತ್ತು. ಹರಪ್ಪ ಲಿಪಿಯು ಚಿತ್ರ ಲಿಪಿಯಾಗಿದೆ. ಅಕ್ಷರಗಳಿಗೆ ಬದಲಾಗಿ ಚಿತ್ರಗಳನ್ನೂ ಅವರು ಉಪಯೋಗಿಸುತ್ತಿದ್ದರು. ಈ ಲಿಪಿಯನ್ನು ಓದಲು ನಡೆದ ಪ್ರಯತ್ನಗಳು ಈ ತನಕ ಪರಾಜಯಗೊಂಡಿತ್ತು. ಹರಪ್ಪ ಜನರಿಗೆ ವಿಶಾಲವಾದ ವ್ಯಾಪಾರ ಸಂಬಂಧಗಳಿದ್ದುವು. ಗುಜರಾತಿನ ಲೋಥಲ್ ಎಂಬ ಪ್ರದೇಶದಿಂದ ಬಂದರಿನ ಅವಶೇಷಗಳನ್ನು ಕಂಡುಹಿಡಿಯಲಾಗಿದೆ. ಮೆಸೊಪೊಟೇಮಿಯಾದ ಜನರೊಂದಿಗೆ ಇವರಿಗೆ ವ್ಯಾಪಾರ ಸಂಬಂಧಗಳಿದ್ದವೆಂಬುದಕ್ಕೆ ಧಾರಾಳ ಪುರಾವೆಗಳು ಲಭಿಸಿವೆ.

**ಚೀನಾದ ನಾಗರಿಕತೆ :** ಕೃಷಿ, ಕರಕುಶಲ, ವಿಜ್ಞಾನ, ತಾಂತ್ರಿಕ ವಿದ್ಯೆ ಎಂಬೀ ಕ್ಷೇತ್ರಗಳಲ್ಲಿ ಪುರಾತನ ಚೀನಿಯರು ಗಮನಾರ್ಹ ಪ್ರಗತಿಯನ್ನು ಸಾಧಿಸಿದ್ದರು. ಅವರು ಲಿನನ್, ರೇಷ್ಮೆ ಬಟ್ಟೆಬರೆಗಳನ್ನು ನೇಯುವುದರಲ್ಲಿ ನಿಷ್ಣಾತರಾಗಿದ್ದರು. ಚೀನಾದ ಲಿಪಿಯು ಚಿತ್ರಲಿಪಿಯಾಗಿತ್ತು. ಅನಂತರದ ಕಾಲದಲ್ಲಿ ಚಿತ್ರಗಳಿಗೆ ಬದಲಾಗಿ ಚಿಹ್ನೆಗಳನ್ನು ಉಪಯೋಗಿಸಲು ಆರಂಭಿಸಿದರು. ಪ್ರತಿಯೊಂದು ಚಿಹ್ನೆಯೂ ಒಂದೊಂದು ಆಶಯವನ್ನು ಪ್ರತಿನಿಧೀಕರಿಸುತ್ತಿತ್ತು. ಸೂರ್ಯ ಹಾಗೂ ಚಂದ್ರನನ್ನು ಆಧಾರವಾಗಿರಿಸಿ ಒಂದು ಕ್ಯಾಲೆಂಡರನ್ನು ಅವರು ತಯಾರಿಸಿದ್ದರು. ಪ್ರತಿಯೊಂದು ವರ್ಷವನ್ನೂ 365¼ ದಿನಗಳಾಗಿ ಲೆಕ್ಕ ಹಾಕಲಾಗಿತ್ತು. ಚಂದ್ರಗ್ರಹಣವನ್ನು ಅವರು ಸ್ಪಷ್ಟವಾಗಿ ಮೊದಲೇ ಊಹಿಸಿ ಹೇಳುತ್ತಿದ್ದರು.